(SRI KADIDAL MANJAPPA.)

nature. Necessary action will be taken on receipt of estimate from the Deputy Commissioner.

ಶ್ರೀ ಎಸ್. ಎಂ. ಲಿಂಗಪ್ಪ.—ಈ ಕೆರೆಯ ರಿಪೇರಿಗೆ ಯಾವಾಗ ಅಂದಾಜು ತಯಾರಾಗಿದೆ ?

Sri KADIDAL MANJAPPA.—I cannot give you the exact date.

ಶ್ರೀ ಎಸ್. ಎಂ. ಲಿಂಗಪ್ಪ.—ಈ ಕೆರೆಯ ಕೆಳಗಿರುವರೈತರು ಅವರ ಭಾಗದ ಹಣವನ್ನು ಕೊಡರೊಪ್ಪಿ, ಸರ್ಕಾರಕ್ಕೆ ಮುಚ್ಚಳಿಕೆ ಬರೆದುಕೊಟ್ಟಿದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಅದಕ್ಕೇ ಕೊಡಬೇಕೆಂದು ಕೇಳುತ್ತಿದ್ದೇವೆ.

Cement concreting of roads in Chikmagalur District.

Q.—545. Sri Y. M. CHANDRASEKHARAIAH (Kadur).—

Will the Government be pleased to state:—

(*a*) the total length (in miles) of roads which have been cement-concreted in the State;

(*b*) the length of such roads in Chikmagalur District;

(*c*) whether the cement-concreting work in respect of roads taken up this year has been completed;

(*d*) whether cement-concreting of roads will be continued next year also by sanctioning more grants ?

A.—Sri KADIDAL MANJAPPA (Minister for Revenue and Public Works).—

(*a*) The total length of roads which have been cement-concreted in the State is 88 miles.

(*b*) The length of such roads in Chikmagalur District is 5 miles and 2 furlongs.

(*c*) No.

(*d*) Yes.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ 88 ಮೈಲಿ ರಸ್ತೆ ಎಂದು ಹೇಳಿರುವುದು ಈ ವರ್ಷದ ಲೆಕ್ಕವೋ ಅಥವಾ ಹೋದವರ್ಷದ ಲೆಕ್ಕವೊ ?

ಶ್ರೀ ಕಡಿದಾಳ್ ಮಂಜಪ್ಪ.—1952-53ನೆಯ ವರ್ಷದವರೆಗೆ.

ಶ್ರೀ ವೈ.ಎಂ ಚಂದ್ರಶೇಖರಯ್ಯ.—ಚಿಕ್ಕಮಗಳೂರು ಜಿಲ್ಲೆಯಲ್ಲಿ, ಕಾರ್ಕಿಕ್ರೀಟ್ ಆಗಿರುವುದು 5 ಮೈಲಿಯಲ್ಲ, 2 ಮೈಲಿ 2 ಫರ್ಲಾಂಗ್ ಎಂಬುದು ಗೊತ್ತಿದೆಯೆ?

ಶ್ರೀ ಕಡಿದಾಳ್ ಮಂಜಪ್ಪ.—ಇಲ್ಲಿ ಕೊಟ್ಟಿರುವುದು ಖರಾರುವಾಕು ಲೆಕ್ಕ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಮಲೆನಾಡು ಪ್ರಾಂತದಲ್ಲಿ ಸಿಮೆಂಟ್ ಕಾರ್ಕ್ರೀಟ್ ರಸ್ತೆಗಳನ್ನು ಮಾಡಬೇಕೆಂಬುದು ಸರ್ಕಾರದವರ ಗಮನದಲ್ಲಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಹೋದಸಾಲಿನಲ್ಲಿ ಚಿಕ್ಕಮಗಳೂರು ಜಿಲ್ಲೆಗೆ ಎಷ್ಟು ಗ್ರಾಂಟು ಕೊಟ್ಟಿದ್ದು ?

ಶ್ರೀ ಕಡಿದಾಳ್ ಮಂಜಪ್ಪ.—ಎರಡು ಲಕ್ಷ ರೂಪಾಯಿಗಳು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಎಷ್ಟು ಖರ್ಚಾಗಿದೆ?

ಶ್ರೀ ಕಡಿದಾಳ್ ಮಂಜಪ್ಪ.—1 ಲಕ್ಷದ 51 ಸಾವಿರ ರೂಪಾಯಿಗಳು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಪೂರ್ತಿ ಖರ್ಚಾಗದಿರಲು ಕಾರಣವೇನು ?

ಶ್ರೀ ಕಡಿದಾಳ್ ಮಂಜಪ್ಪ.—Equipment ಇಲ್ಲದೇಯಿದ್ದುದು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—'ಮಿಕ್ಸರ್‌ಗಳು', ರಾರಿಗಳು ಮುಂತಾದ್ದನ್ನು ಕೊಡದಿರುವುದೇ ಕಾರಣವಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ನಿಜ, ಕೆಲವು ಕಡೆ 'ಮಿಕ್ಸರ್ಸ್' ಬಹಳ ಕಡಮೆ ಇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಸಾವಾನುಗಳನ್ನು ಎರಡು ವರ್ಷಗಳಿಂದ ಕೇಳುತ್ತಿದ್ದರೂ ಕಳುಹಿಸದೇಯಿರುವುದರಿಂದ ಖರ್ಚಾಗಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಎರಡು ಲಕ್ಷದಲ್ಲಿ 1 ಲಕ್ಷದ 52 ಸಾವಿರ ಚಿಲ್ಲರೆ ಜನವರಿಯವರೆಗೆ ಖರ್ಚಾಗಿದೆ; ಬಹುಶಃ ಈ ವರ್ಷ ಪೂರ್ತಿ ಖರ್ಚಾಗುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—1951-52 ರಲ್ಲಿಯೂ ಹೀಗೆಯೇ ಖರ್ಚಾಗಿಲ್ಲವೆಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ಸಾಲಿನಲ್ಲಿ ಎಷ್ಟು ಒದಗಿಸಿದೆ ?

ಅಧ್ಯಕ್ಷರು.—(ಡಿ) ಭಾಗದ ಉತ್ತರ ನೋಡಿ, ಅದರಲ್ಲಿ ತಿಳಿಸಿದ್ದಾರೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಹರಿಹರ—ಬೆಂಗಳೂರು ರಸ್ತೆಯಲ್ಲಿ ಎಷ್ಟು ಮೈಲಿ ಸಿಮೆಂಟ್ ಕಾರ್ಕ್ರೀಟ್ ಮಾಡಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈ ರಸ್ತೆಯಲ್ಲಿ ಬಹಳ ಟ್ರಾಫಿಕ್ ಎಂಬುದು ತಮ್ಮ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಎಷ್ಟು ವರ್ಷದಲ್ಲಿ ಈ ರಸ್ತೆಯನ್ನು ಪೂರ್ತಿ ಸಿಮೆಂಟ್ ಕಾರ್ಕ್ರೀಟ್ ಮಾಡಬೇಕೆಂದಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ಹಣ ಒದಗಿದ ಹಾಗೆಲ್ಲಾ ಮಾಡುತ್ತೇವೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—1953-54ರಲ್ಲಿ ಎಷ್ಟು ಮೈಲ ಮಾಡಲು ಕಾರ್ಯಕ್ರಮ ಹಾಕಿಕೊಂಡಿದ್ದೀರಿ ?

ಶ್ರೀ ಕಡಿದಾಳ್ ಮಂಜಪ್ಪ.—ನುಮಾರು 19 ಲಕ್ಷ ರೂಪಾಯಿಗಳನ್ನು ಒದಗಿಸಿದ್ದೇವೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಇದರಲ್ಲಿ ಹರಿಹರ–ಬೆಂಗಳೂರು ರಸ್ತೆಗೆಷ್ಟು ?

ಶ್ರೀ ಕಡಿದಾಳ್ ಮಂಜಪ್ಪ.—ಈಗ ಆ ವಿವರಗಳನ್ನು ಹೇಳುವುದಕ್ಕಾಗುವುದಿಲ್ಲ.

ಶ್ರೀ ಮುಲ್ಕ ಗೋವಿಂದರೆಡ್ಡಿ.—ಈ ರಸ್ತೆಯಲ್ಲಿ ಬಹಳ ಟ್ರಾಫಿಕ್ ಇರುವುದರಿಂದ ಜಾಗ್ರತೆ ಮಾಡಿಸಲು ಸಾಧ್ಯವೇ ?

ಶ್ರೀ ಕಡಿದಾಳ್ ಮಂಜಪ್ಪ.—ಹಣದಮೇಲೆ ಅವಲಂಬಿಸಿದೆ.

ಶ್ರೀ ಮುಲ್ಕ ಗೋವಿಂದರೆಡ್ಡಿ.—1953-54ರಲ್ಲಿ ಈ ರಸ್ತೆಗೆ ಪ್ರಯಾರಿಟಿ ಕೊಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನಿರ್ದಿಷ್ಟವಾಗಿ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಕೋರಾರ ಜಿಲ್ಲೆಯಲ್ಲಿ ಸಿಮೆಂಟ್ ಕಾಂಕ್ರೀಟ್ ರಸ್ತೆ ಕೆಲಸವನ್ನು ತೆಗೆದುಕೊಂಡಿದ್ದಾರೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—1952–53ರಲ್ಲಿ ಖರ್ಚಾಗಿಲ್ಲ.

ಶ್ರೀ ಬಿ. ಪಿ. ನಾರಾಯಣರೆಡ್ಡಿ.—ಕೆಲಸ ಮಾಡಿಸಿದರಲ್ಲವೆ ಖರ್ಚಾಗುವುದು.

ಶ್ರೀ ಕಡಿದಾಳ್ ಮಂಜಪ್ಪ.—ಕ್ಷಾಮದಕಡೆ ಗಮನ ವೆಲ್ಲಾ ಹೋಯಿತು.

ಶ್ರೀ ಎಂ. ಸಿ. ಆಂಜನೇಯರೆಡ್ಡಿ.—ಅಲ್ಲಿ ಟ್ರಾಫಿಕ್ ಇಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಇದೆ. ಈ ವರ್ಷ 1 ಲಕ್ಷ 60 ಸಾವಿರ ರೂಪಾಯಿಗಳನ್ನು ಒದಗಿಸಿದೆ.

ಶ್ರೀ ಎಸ್. ಗೋಪಾಲಗೌಡ.—ಹರಿಹರದಿಂದ ಶಿವಮೊಗ್ಗಕ್ಕೆ ಟ್ರಾಫಿಕ್, ಅಧರಲ್ಲಿಯೂ ವ್ಯವಸಾಯಕ್ಕೆ ಸಂಬಂಧಪಟ್ಟದ್ದು ಜಾಸ್ತಿಯಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಹೌದು.

ಶ್ರೀ ಎಸ್. ಗೋಪಾಲಗೌಡ.—ಈ ರಸ್ತೆಯನ್ನು ಕಾರ್ಕ್ರೀಟ್ ಮಾಡಿಸುವ ಯೋಚನೆಯಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ನಕ್ಕೆಬೈಲು ತುಂಗಾ ಅಣೆಕಟ್ಟಿಗೆ ಹೋಗುವ ರಸ್ತೆಗೆ ಮಾಡಿಸಬೇಕೆಂದು ಯೋಚನೆ ಇದೆ.

ಶ್ರೀ ಎಸ್. ಗೋಪಾಲಗೌಡ.—ಶಿವಮೊಗ್ಗ ಜಿಲ್ಲೆಯಲ್ಲಿ ರಸ್ತೆಗಳು ತುಂಬ ಕೆಟ್ಟಿವೆಯೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ತೃಪ್ತಿಕರವಾದ ಸ್ಥಿತಿಯಲ್ಲಲ್ಲವೆಂದು ಆಗಲೇ ಒಪ್ಪಿಕೊಂಡಿದ್ದೇನೆ. ಹಣದ ಅಡಚಣೆಯಿಂದ ಎಲ್ಲ ಕಡೆಯೂ ತೆಗೆದುಕೊಳ್ಳುವುದಕ್ಕಾಗಲಿಲ್ಲ.

ಶ್ರೀ ಎಸ್. ಗೋಪಾಲಗೌಡ.—ಮರೆನಾಡು ಪ್ರದೇಶದಲ್ಲಿ ಹೆಚ್ಚು ಮಳೆ ಬೀಳುವುದರಿಂದ ರಸ್ತೆಗಳು ಹೆಚ್ಚು ಕೆಡುತ್ತವೆ. ಆದಕಾರಣ ಹೆಚ್ಚು ಗ್ರಾಂಟುಕೊಟ್ಟು ಹೆಚ್ಚು ದುರಸ್ತುಮಾಡಿಸಬೇಕಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಈಗಲೇ ಮೈಲಿಗೆ ಒಂದು ಸಾವಿರ ರೂಪಾಯಿಗಳನ್ನು maintenance grant ಕೊಡುತ್ತಿದ್ದೇವೆ.

ಶ್ರೀ ಜಿ. ಶಿವಪ್ಪ.—ಹರಿಹರದಿಂದ ಬೆಂಗಳೂರಿಗೆ ಬರುವ ರಸ್ತೆ 'ಇಂಟರ್ ನ್ಯಾಷನರ್ ಹೈವೆ' ಅಲ್ಲವೆ ?

Sri KADIDAL MANJAPPA.—Sir, it is not international. It comes under 'National highways'. (Laughter).

Mr. SPEAKER.—Any other supplementary ?

ಶ್ರೀ ಜಿ. ಶಿವಪ್ಪ.—ಒಟ್ಟು ಎಷ್ಟು ಮೈಲಿ ತಾರು ಮತ್ತು ಸಿಮೆಂಟ್ ರಸ್ತೆ ಮಾಡಿದ್ದೀರಿ ?

Mr. SPEAKER.—Up to Tumkur.

ಶ್ರೀ ಜಿ. ಶಿವಪ್ಪ.—ಚಿತ್ರದುರ್ಗ ಜಿಲ್ಲೆಯಲ್ಲಿ ಎಷ್ಟು ಮೈಲಿ ಮಾಡಿದೆ ?

ಶ್ರೀ ಕಡಿದಾಳ್ ಮಂಜಪ್ಪ.—ನೋಟೀಸ್.

ಶ್ರೀ ಜಿ. ಶಿವಪ್ಪ.—ಶ್ರಿಮಾನ್ ಭೀಮಪ್ಪನಾಯಕರು ಈ ಅಧಿವೇಶನ ಪ್ರಾರಂಭವಾದಾಗಿನಿಂದಲೂ ಒತ್ತಾಯ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

Mr. SPEAKER.—So the Member does not want that road. Only Sri Bheemappa Naik wants it (Laughter).

Restoration of Motagadahalli Tank, Hoskote Taluk.

Q.—555. Sri H. T. PUTTAPPA (Hoskote-Anekal—Scheduled Castes).—

Will the Government be pleased to state :—

whether they have ordered the restoration of the breached tank of Motagadahalli in Nandagudi Hobli of Hoskote Taluk ?

A.—Sri KADIDAL MANJAPPA (Minister for Revenue and Public Works).—

No.

ಶ್ರೀ ಎಚ್. ಟಿ. ಪುಟ್ಟಪ್ಪ.—ಇಲ್ಲಿ ಮೋತಗದಹಳ್ಳಿ ಕೆರೆ ಎಂದು ಮುದ್ರಣವಾಗಿದೆ. ಹೆಸರು ತಪ್ಪಾಗಿದೆ.

Mr. SPEAKER.—There is some printing mistake.

ಶ್ರೀ ಎಚ್. ಟಿ. ಪುಟ್ಟಪ್ಪ.—ಅರ್ಜಿ ಬಂದಿದೆಯೆ ಇದನ್ನು ರಿಪೇರಿ ಮಾಡಬೇಕೆಂದು ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿದೆ.

ಶ್ರೀ ಎಚ್. ಟಿ. ಪುಟ್ಟಪ್ಪ.—ಎಷ್ಟು ದಿವಸವಾಯಿತು ?

ಶ್ರೀ ಕಡಿದಾಳ್ ಮಂಜಪ್ಪ.—ಎಷ್ಟು ದಿವಸವೆಂದು ಹೇಳುವುದಕ್ಕಾಗುವುದಿಲ್ಲ. ಇದಕ್ಕೆ ಒಂದು ಪ್ರಾಜೆಕ್ಟ್ 40 ಸಾವಿರ ರೂಪಾಯಿಗಳಿಗೆ ತಯಾರಾಗಿದೆ. ಇಷ್ಟು ಖರ್ಚಾಗುತ್ತದೆ ರಿಪೇರಿಮಾಡುವುದಕ್ಕೆ. ಇದು ಬಹಳ ಸಣ್ಣ ಕೆರೆ. ಬಹಳ ಕಡಮೆ ಜಮೀನಿಗೆ, ನುಮಾರು 25 ಎಕರೆಗೆ, ಪ್ರಯೋಜನ ಪಡೆಯುವುದಕ್ಕೆ ಇಷ್ಟು ಖರ್ಚುಮಾಡುವುದು ಸಾಧುವೆ ಎಂದು ಯೋಚನೆ ಮಾಡುತ್ತಿದ್ದೇವೆ.

ಶ್ರೀ ಎ. ಆರ್. ನಾಯ್ಡು.—ನಿಂಪ್ರದಾಯವಾಗಿರುವುದರಿಂದ ನಾವು ಪ್ರಶ್ನೆಗಳನ್ನು ಕಳುಹಿಸುತ್ತೇವೆ, ತಾವು ಅವಕ್ಕೆ ಉತ್ತರಕೊಡುತ್ತೀರಿ, ಅದರಂತೆ ನಡೆಸಲು ಕಾರ್ಯಕ್ರಮ ತೆಗೆದುಕೊಳ್ಳುತ್ತೀರಾ ?